ಬಡ್ತಿ ಪಡೆದು ಬಂದ ಆರು ತಿಂಗಳಿಗೆ ವೈ.ಎಸ್. ರೆಡ್ಡಿ ಹೈದರಾಬಾದ್‌ಗೆ ವರ್ಗಾವಣೆಯಾಗಿದ್ದರು. ಆ ಮಧ್ಯೆ ಹತ್ತನ್ನೆರಡು ನಕ್ಸಲರನ್ನು ಮತ್ತು ನಕ್ಸಲ್ ಮಾಹಿತಿದಾರರನ್ನು ಎನ್‌ಕೌಂಟರ್ ಮಾಡಿದ್ದರು. ಒಮ್ಮೆ ಫೋನ್ ಮಾಡಿ, 'ರಂಗರಾವ್ ನಿನ್ನ ಕೈ ತೆಗೆದವನನ್ನು ಬೇಕಾಗಿಯೇ ಎನ್‌ಕೌಂಟರ್ ಮಾಡಿ ಮುಗಿಸಿದೆ. ನೀನಿನ್ನು ಪ್ರಶಾಂತವಾಗಿರು' ಎಂದು ನಕ್ಕಿದ್ದರು. ರಂಗರಾವ್ ಈ ಜಿಲ್ಲೆಯಲ್ಲೂ ಖಡಕ್ ಅಧಿಕಾರಿಯೆಂದೇ ಹೆಸರು ಪಡೆದರು. ನಕ್ಸಲರು ತಮ್ಮ ಚಟುವಟಿಕೆಗಳನ್ನು ಆಂಧ್ರಪ್ರದೇಶ ಮತ್ತು ಒರಿಸ್ಸಾದ ನಡುವಿನ ದಂಡಕಾರಣ್ಯಕ್ಕೆ ವರ್ಗಾಯಿಸಿದ್ದರು. ರಂಗರಾವ್ ಅದಿಲಾಬಾದ್‌ಗೆ ಬಂದು ಹತ್ತಿರ ಹತ್ತಿರ ಎರಡು ವರ್ಷಗಳಾಗುತ್ತಾ ಬಂದಿತ್ತು. ಅಂಥ ಒಂದು ದಿನ ರಾತ್ರಿ ಹತ್ತು ಗಂಟೆಗೆ ಫೋನ್ ಕರೆಯೊಂದು ಬಂದಿತ್ತು.

'ನಮಸ್ಕಾರ ಸಾಹೇಬರೇ...' ಆ ಕಡೆಯಿಂದ ಗದ್ದರ್ ಧ್ವನಿ. ಸರ್ಕಾರ ಗದ್ದರ್ ಮೇಲಿನ ನಿಷೇಧವನ್ನು ಹಿಂಪಡೆದಿತ್ತು. ಹಾಗಾಗಿ ಗದ್ದರ್ ಅಂಡರ್ ಗ್ರೌಂಡ್‌ನಿಂದ ಹೊರ ಬಂದಿದ್ದರು. ನಕ್ಸಲರ ಮತ್ತು ಸರ್ಕಾರದ ಮಧ್ಯೆ ಸಂಧಾನ ಮಾತುಕತೆಗಳಿಗೆ ಪ್ರಯತ್ನಗಳು ನಡೆಯುತ್ತಿದ್ದವು.

'ನಮಸ್ಕಾರ ಗುಮ್ಮಡಿ ವಿಠಲ ರಾವ್‌ರವರಿಗೆ' ರಂಗರಾವ್ ಪ್ರತಿಯಾಗಿ ನಮಸ್ಕಾರ ಹೇಳಿದ್ದರು.

'ಅದು ನನ್ನ ಹಳೆಯ ಹೆಸರು ಸಾಹೇಬರೆ, ನನ್ನನ್ನು ಪ್ರೀತಿಯಿಂದ ಗದ್ದರ್ ಎಂದೇ ಕರೆಯಿರಿ' ಗದ್ದರ್ ಎಂಬ ಹೆಸರಿನಲ್ಲಿ ಇದ್ದ ಫೋರ್ಸ್ ಅವರ ಮಾತುಗಳಲ್ಲಿ ಇರಲಿಲ್ಲ. ಗದ್ದರ್ ಮಾತುಗಳು ವಿನಯದಲ್ಲಿ ಮಿಂದೆದ್ದಂತೆ ಕೇಳುತ್ತಿದ್ದವು.

'ಹೇಳಿ ಮಿಸ್ಟರ್ ಗದ್ದರ್, ಏನು ಫೋನು ಮಾಡಿದ್ದು' ರಂಗರಾವ್ ಮಾತುಗಳೂ ಮೃದುವಾಗಿದ್ದವು.

'ನಿಮ್ಮನ್ನು ಭೇಟಿಯಾಗಿ ಒಂದಿಷ್ಟು ಮಾತನಾಡಬೇಕಿತ್ತು ಸಾಹೇಬರೆ' ಗದ್ದರ್ ಧ್ವನಿಯಲ್ಲಿ ಕೋರಿಕೆಯಿತ್ತು.

'ನಿಮ್ಮ ಮೇಲೆ ಸರ್ಕಾರ ನಿಷೇಧ ತೆಗೆದುಹಾಕಿದೆ. ಹಾಗಾಗಿ ನೀವು ಯಾವಾಗ ಬೇಕಾದರೂ ಬಂದು ನನ್ನನ್ನು ಭೇಟಿಯಾಗಬಹುದು' ರಂಗರಾವ್ ಸಹಜವಾಗಿ ಹೇಳಿದ್ದರು.

'ಆದರೂ ಸಾಹೇಬರೆ ನಮ್ಮ ಭೇಟಿಯನ್ನು ಗೌಪ್ಯವಾಗಿಟ್ಟರೆ ಒಳ್ಳೆಯದು' ಬೇಡಿಕೆಯಿತ್ತು ಗದ್ದರ್ ಧ್ವನಿಯಲ್ಲಿ.

'ಆಗಲಿ, ಯಾವಾಗ ಬರುತ್ತೀರಿ ಹೇಳಿ' ಒಪ್ಪಿದ್ದರು.

'ನಾಳೆ ರಾತ್ರಿ ಒಂಬತ್ತು ಗಂಟೆಗೆ ಬರ್ತೀನಿ ಸಾಹೇಬರೆ, ಸಾಧ್ಯವಾದರೆ ಒಂದಿಷ್ಟು ಊಟ' ಈ ಗದ್ದರ್ ಒಂಥರಾ ತಮಾಷೆಯ ಮನುಷ್ಯ ಅನ್ನಿಸಿತು.

'ಆಗಲಿ, ಊಟಕ್ಕೆ ಬನ್ನಿ' ನಗು ತೇಲಿಸಿದ್ದರು ರಂಗರಾವ್.

'ಆಯಿತು ಸಾಹೇಬರೆ ಧನ್ಯವಾದಗಳು. ಮಟನ್ ಅಂದ್ರೆ ನಂಗೆ ಬಲು ಇಷ್ಟ' ಫೋನ್ ಕಟ್ ಆಗಿತ್ತು. ಮಾರನೆಯ ದಿನ ರಾತ್ರಿ ಒಂಬತ್ತು ಗಂಟೆಗೆ ರಂಗರಾವ್ ಗದ್ದರ್‌ಗಾಗಿ ಕಾಯುತ್ತಿದ್ದರು. ಸಮಯಕ್ಕೆ ಸರಿಯಾಗಿ ವ್ಯಕ್ತಿಯೊಬ್ಬರು ಅಂಬಾಸಿಡರ್ ಕಾರಿನಲ್ಲಿ ಬಂದಿಳಿದಿದ್ದರು. ಕಾನ್‌ಸ್ಟೇಬಲ್ ಪೂರ್ಣವಾಗಿ ತಲಾಶು ಮಾಡಿ ಒಳಗೆ ಕರೆತಂದಿದ್ದರು.



'ನಮಸ್ಕಾರ ಸಾಹೇಬರೆ' ಬಂದ ವ್ಯಕ್ತಿ ಕೈಮುಗಿದಿದ್ದರು. ಅರೆ, ಗದ್ದರ್! ಗುರುತು ಹಿಡಿಯಲು ಸಾಧ್ಯವಾಗದಂತೆ ಇದ್ದರು. ಶರ್ಟ್ ಪ್ಯಾಂಟ್ ತೊಟ್ಟಿದ್ದ ಗದ್ದರ್ ಶಿಸ್ತಾಗಿ ಶೇವಿಂಗ್ ಮಾಡಿದ್ದರು. ಬರೀ ಮೈಯಲ್ಲಿ ಕೆಂಪು ಕಂಬಳಿ ಹೊದ್ದು, ಕೈಯ್ಯಲ್ಲಿ ಕೆಂಪು ಬಾವುಟ ಹಿಡಿದು, ಕಾಲುಗಳಿಗೆ ಗೆಜ್ಜೆ ಕಟ್ಟಿ, ಗಂಟೆಗಟ್ಟಲೆ ದಣಿವರಿಯದೆ ಕ್ರಾಂತಿ ಗೀತೆಗಳನ್ನು ಹಾಡುವ ಗದ್ದರ್ ಇವರೇನಾ ಅನ್ನಿಸಿತು ಕ್ಷಣ ರಂಗರಾವ್‌ಗೆ.

ರಂಗರಾವ್ ತಾಯಿಯೇ ಗದ್ದರ್‌ಗೆ ಊಟ ಬಡಿಸಿದ್ದರು. ಅನ್ನ ಮಟನ್ ಸಾರು, ಮಟನ್ ಕೈಮ. ಗದ್ದರ್ ತೃಪ್ತಿಯಿಂದ ಊಟ ಮಾಡಿ, ರಂಗರಾವ್ ತಾಯಿಯ ಕಾಲಿಗೆ ಬಿದ್ದು ನಮಸ್ಕರಿಸಿದ್ದರು. 'ಕಾಲಿಗೇಕೆ ಬೀಳ್ತೀಯ ನಡಿಯಪ್ಪ' ಎಂದು ರಂಗರಾವ್ ತಾಯಿ ಹಿಂದಕ್ಕೆ ಸರಿದಿದ್ದರು. 'ಅನ್ನ ಇಟ್ಟ ಪ್ರತಿಯೊಬ್ಬರೂ ಹೆತ್ತ ತಾಯಿಗೆ ಸಮಾನರೇ